"ನಾನು ಕಳ್ಳ ಅಂತ ಹೇಳಿರಬೇಕಲ್ಲ. ಅವರಿಗೆ ಮಾನಸಿಕ ರೋಗ. ಹಣ ಕಾಣೆಯಾಗ್ತಾ ಇದೆ ಅನ್ನುವ ಭ್ರಮೆ. ಊರಲ್ಲೆಲ್ಲಾ ನಾನು ಕಳ್ಳ ಅಂತ್ಲೇ ಹೇಳ್ತಾ ಬರ್ತಿದ್ದಾರೆ... ನಿಜ ಹೇಳ್ತೀನಿ ಸಾರ್, ನಾನು ಹಣ ಕದ್ದಿಲ್ಲ." ಹತಾಶೆಯಿಂದ ಬಿಕ್ಕಳಿಸಿದ.

"ಅಂದ್ರೆ ಹಣ ಕಾಣೆಯಾಗ್ತಾ ಇರೋದು ಸುಳ್ಳು ಅಂತ ನೀನು ಹೇಳೋದೆ?"

ಅಜಿತ್ ಪ್ರತಿಯಾಡಲಿಲ್ಲ. ಶೂನ್ಯ ದೃಷ್ಟಿ ಬೀರಿದ.

"ನೀನಿನ್ನೂ ಡಿಪ್ಲೋಮೇಟ್ ಬಾರಿನಲ್ಲಿ ಕುಡಿಯೋದನ್ನ ಬಿಟ್ಟಿಲ್ಲ, ಅಲ್ವೆ?" ಇರಿಯುವಂತೆ ಕರಮಚಂದನ ಪ್ರಶ್ನೆ.

ಅಜಿತ್ ಮೋರೆಯಲ್ಲಿ ಅಚ್ಚರಿ ಬಿಂಬಿಸಿದ.

"ಅದನ್ನ ಹೇಳೋಕೆ ಹೆಚ್ಚೇನೂ ಬುದ್ಧಿವಂತಿಕೆ ಬೇಡ. ಮುಂದಕ್ಕೆ ಚಾಚಿದ ನಿನ್ನ ದೇಹದ ನಡುಭಾಗ ಕತೆ ಹೇಳುತ್ತೆ. ಅದಕ್ಕಿಂತಲೂ ಬಲವಾದ ಸಾಕ್ಷ್ಯ ನೀನು ಕಟ್ಟಿರೋ ವಾಚು! ಇತ್ತೀಚಿಗೆ ಆ ಬಾರಿನವರು ತಮ್ಮ ಇಪ್ಪತ್ತೈದನೇ ವರ್ಷಕ್ಕೆ ತಮ್ಮ ಮಾಮೂಲಿ ಗ್ರಾಹಕರಿಗೆ ಕೊಟ್ಟ ಉಡುಗೊರೆ ಸುಳ್ಳು ಹೇಳೋಲ್ಲ. ಅವರು ನನ್ನ ಕಕ್ಷಿಗಾರರು. ನನ್ಗೂ ಒಂದು ವಾಚು ಕಳಿಸಿದ್ದರು."

"ಸಾರ್. ನಾನು ಕಾಸು ಖರ್ಚು ಮಾಡಿ ಕುಡೀತಿಲ್ಲ. ನನ್ ಫ್ರೆಂಡು ಮಾತಂಡ ಕಿಟ್ಟಪ್ಪ ಕಂಪನಿ ಬೇಕು ಅಂತ ಕರಿತಾನೆ. ಹೇಳಿ, ಅವ್ನಿಗೆ ಕಂಪನಿ ಕೊಟ್ರೆ ತಪ್ಪೆ? ಹಣ ಕದ್ದು ಕುಡಿಯುವಂತಹ ಚಟ ನನಗಿಲ್ಲ."

ಆತ ಹಠಾತ್ ಎದ್ದು ನಿಂತ.

"ಕಳವಿನ ತನಿಖೆ ಮಾಡೋದು ವ್ಯರ್ಥ ಸಾರ್. ದಯವಿಟ್ಟು ನನ್ ತಂದೆ ಮಾತನ್ನು ನಂಬಬೇಡಿ." ಅಷ್ಟು ಹೇಳಿ ಆತ ಭುಸುಗುಡುತ್ತಾ ಹೊರಟು ಹೋದ. ಕರಮಚಂದ ಜೋರಾಗಿ ನಕ್ಕ.

★★★

ತುಸು ನಿರ್ಜನವಾದ, ಎತ್ತರದ ಜಾಗದಲ್ಲಿತ್ತು ಬೋಪಣ್ಣನ ಮನೆ. ಅಲ್ಲಿಂದ ಬೆಟ್ಟದ ಮೇಲಿರೋ ಈಶ್ವರ ದೇವಸ್ಥಾನ ಕಾಣಿಸುತ್ತಿತ್ತು. ಮರುದಿನವೇ ನಾವಲ್ಲಿಗೆ ಹೋಗಿದ್ದು ಬಹಳ ಸೂಕ್ತವಾಗಿತ್ತೆನ್ನುವುದನ್ನು ಬೋಪಣ್ಣನ ನುಡಿಗಳು ಶ್ರುತಪಡಿಸಿದವು.

"ಬನ್ನಿ ಕರಮಚಂದ, ನೀವ್ ಬಂದ ಸಮಯ ಸರಿಯಾಗಿದೆ. ನಿನ್ನೆ ರಾತ್ರಿ ಮತ್ತೆ ಕಳ್ಳತನವಾಯ್ತು, ನಿಮ್ಗೆ ಫೋನು ಮಾಡೋದ್ರಲ್ಲಿದ್ದೆ."

ಬೋಪಣ್ಣ ನಮ್ಮನ್ನು ಒಳಗೆ ಕರೆದೊಯ್ದ. ಚಿಕ್ಕದಾದ ಚಾವಡಿ ದಾಟಿದೊಡನೆ, ವಿಶಾಲವಾದ ಹಜಾರ. ಚಾವಡಿಯ ಪಕ್ಕದಲ್ಲಿ ಹಜಾರಕ್ಕೆ ತೆರೆದುಕೊಳ್ಳುವಂತೆ ಇದ್ದುದು ಬೋಪಣ್ಣನ ಮಲಗುವ ಕೋಣೆ. ಅದಕ್ಕೆ ಲಂಬವಾಗಿ ಒತ್ತಿಕೊಂಡು ಇದ್ದ ಕೋಣೆಯಲ್ಲೇ ಕಳ್ಳತನ ನಡೆದಿದ್ದು. ಗೋಡೆಗೇ ಜೋಡಿಸಿದ್ದ ಹಳೆಯ ಕಾಲದ ಕಬ್ಬಿಣದ ಕಪಾಟು. ಬೋಪಣ್ಣ ಒಳಗಿದ್ದ ಲಾಕರ್ ತೆರೆದು ತೋರಿಸಿದ.

"ನಿನ್ನೆ ತಾನೇ ಬ್ಯಾಂಕಿನಿಂದ ತೆಗೆದ ಹಣ, ಐದು ಸಾವಿರವನ್ನು ಚಿಕ್ಕ ಕೈಚೀಲ, ಅಂದ್ರೆ ಪೌಚ್‌ನಲ್ಲಿಟ್ಟು ಇಲ್ಲಿರಿಸಿದ್ದೆ. ಬೆಳಿಗ್ಗೆ ನೋಡುವಾಗ ಕೈಚೀಲವೇ ನಾಪತ್ತೆ. ಇದುವರೆಗೆ ಹಣ ಮಾತ್ರ ಕಾಣೆಯಾಗ್ತಿತ್ತು. ಈ ಸಾರಿ ಪರ್ಸ್ ಸಮೇತ ಕಳವು. ಅದನ್ನು ಕೂಡ ಕಾಣದಂತೆ ಮೂಲೆಯಲ್ಲಿ ಇರಿಸಿದ್ದೆ."

ಕರಮಚಂದ ಕಪಾಟಿನೊಳಗೆ ಕೂಲಂಕಷವಾಗಿ ಪರಿಶೀಲಿಸಿದ. ಕಪಾಟಿನೊಳಗೆ ವಸ್ತುಗಳು ಅಸ್ತವ್ಯಸ್ತವಾಗಿದ್ದವು. ಕಳ್ಳ ಹುಡುಕಾಟ ನಡೆಸಿ, ಹಣದ ಪರ್ಸ್ ಎತ್ತಿಕೊಂಡು ಹೋಗಿದ್ದ.

"ರಾತ್ರಿ ಕಪಾಟಿನ ಕೀ ನಿಮ್ಮ ಬಳಿ ಇರಿಸಿಕೊಂಡಿದ್ರಾ?"

ಹೌದೆನ್ನುವಂತೆ ಕತ್ತು ಆಡಿಸಿದ ಬೋಪಣ್ಣ.

"ಆಂ... ಇದೇನಿದು, ಬೋಪಣ್ಣ? ನೀಲಿ ಕಲೆ?"